**ದಿನಾಂಕಃ 26-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ. ಬಿ.ಆರ್.ಡಿ. ವಕೀಲರಿಂದಃ**

ರಾಘವೇಂದ್ರ ಸ್ವಾಮಿ ದೇವಸ್ಥಾನ 6 ಗಂಟೆಯ ಮೇಲೆ ತೆಗೆಯುತ್ತದೆ ಎಂದರೆ ಸಾಕ್ಷಿಯು ಗುರುವಾರ 5 ಗಂಟೆಗೆ ತೆಗೆಯುತ್ತದೆ ಎನ್ನುತ್ತಾರೆ. ಪೋಲಿಸರು ಯಾವ ವಿಚಾರಕ್ಕೆ ಕರೆದಿರುತ್ತಾರೆ ಎಂದರೆ ಇಲ್ಲ ಎನ್ನುತ್ತಾರೆ. ಯಾವ ನೀಮ್ಮ ಯಾವುದೇ ರೀತಿ ಮಹಜರ್ ಮಾಡಿರುವುದಿಲ್ಲ ಎಂದರೆ ಮಾಡಿರುತ್ತಾರೆ ಎನ್ನುತ್ತಾರೆ. ನಿಮ್ಮಿಂದ ಸಹಿಯನ್ನು ಪಡೆದು ಕೆೊಂಡಿರುತ್ತಾರೆ ಎಂದರೆ ಸರ್ಕಾರಿ ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತಾರೆ ಎನ್ನುತ್ತಾರೆ. 2 ಸಹಿಗಳನ್ನು ಸಹ ಆಸ್ಪತ್ರೆಯಲ್ಲಿ ಮಾಡಿರುತೆತೇನೆ ಎನ್ನುತ್ತಾರೆ. ನೀವು ಸಹಿ ಮಾಡಿದಾಗ ಸದರಿ ಪತ್ರದಲ್ಲಿ ಏನು ಇರುತ್ತದೆ ಎಂದು ತಿಳಿದು ಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಸದರಿ ಪತ್ರದಲ್ಲಿ ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ ಚಾಸಾ-1 ರವರು ತುಂಬಾ ಸೀರಿಯಸ್ ಆಗಿದ್ದ ಕಾರಣ ತಿಳಿದು ಕೊಳ್ಳಲಿಲ್ಲ ಎನ್ನುತ್ತಾರೆ. ತಾಲ್ಲೂಕು ಕಚೇರಿ ರೆಡ್ಡಿಸ್ ಮಿಲ್ಟ್ರಿ ಹೋಟೆಲ್ 2 ಹಂಪ ಇರುವಂತಹ ಜಾಗ ಅಲ್ಲಿ ವಾಹನ ನಿಧಾನವಾಗಿ ಚಲಿಸಬೇಕು ಎಂದರೆ ಸರಿಯಲ್ಲ. ದೇವಸ್ಥಾ ನಂತರ ರಸ್ತೆಯಲ್ಲಿ ಲಾರಿ ಇತ್ತು ಸದರಿ ಲಾರಿ ಕೆಟ್ಟು ಹೋದ ಕಾರಣ ತಳ್ಳುತ್ತಿದ್ದರು ನೀವು ಆ ಲಾರಿಯಿನ್ನು ನಿಸೇವು ನೋಡಿದ್ದೀರಾ ಎಂದರೆ ಸುಳ್ಳು ಎನ್ನುತ್ತಾರೆ. ಸದರಿ ಜಾಗದಲ್ಲಿ ವಾಹನಗಳು ನಿಧಾನವಾಗಿ ಚಲಿಸಬೇಕು. ಚಾಸಾ-1 ರವರು ಸ್ನೇಹಿತರಾದ ಕಾರಣ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಚಾಸಾ-1 ರವರು ಅಜಾರಾುಕತೆಯಿಂದ ವಾಹನವನ್ನು ಚಲಿಸಿಕೊಡುಂ ಬಂದು ಅವರೇ ಸ್ವತಃ ಬಸ್ಸಿಗೆ ಡಿಕ್ಕಿ

ಹೊಡೆದು ಬಿದ್ದು ಗಾಯ ಮಾಡಿ ಕೊಂಡಿರುತ್ತಾರೆ ಆ ರೀತಿ ಇದ್ದರು ನೀವು ಅವರ ಪರವಾಗಿ ಸುಳ್ಳು ಸಾಕ್ಷ ನುಡಿಯುತ್ತೀದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಹಾಗೂ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಚಾಸಾ–1 ರವರು ಪರಿಹಾರ ಕೇಳಿ ಕೋರಿರುತ್ತಾರೆ ಸದರಿ ವಿಚಾರ ಗೊತ್ತಿದ್ದರೂ ಸಹ ಆರೋಪಿಯಿ ಸುಳ್ಳು ಸಾಕ್ಷ್ಯ ನುಡಿಯುತ್ತಿದೀರಿ ಎಂದರೆ ಸರಿಯಲ್ಲ. ಕೆ ಎಸ್ ಆರ್. ಟಿ ಸಿ ಬಸ್ ಯಾವುದೇ ತಪ್ಪು ದಾಯಲ್ಲಿ ಬಂದಿಲ್ಲ ಸದರಿ ಬಸ್ ಗೆ ಡಿಕ್ಕಿ ಹೊಡಿದಿರುತ್ತಾರೆ ಎಂದರೆ ಸರಿಯಲ್ಲ. ರಾಘವೇಂದ್ರ ಸ್ವಾಮಿ ದೇವಸ್ಥಾನ ದಿಂದ ತಾಲ್ಲೂಕು ಕಚೇರಿಯ ಮಕ್ತಾಯದ ರಸ್ತೆ ಸದರಿ ಬಸ್ ತೆಗೆದು ಕೊಳ್ಳಲು ಸಾದಧ್ಯವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**Sd/-**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.